# ಅಭ್ಯಾಸ 15.1

15.1.1. ಕೆಳಗಿನವುಗಳ ಅನುಪಾತ ಕಂಡುಹಿಡಿಯಿರಿ.

| | ಅನುಪಾತ |
|---|---|
| (a) ಪ್ರತಿ ಗಂಟೆಗೆ 15ಕಿ.ಮೀ ನಂತಿರುವ ಸೈಕಲ್‌ನ ಜವ. ಹಾಗೂ ಪ್ರತಿ ಗಂಟೆಗೆ 30ಕಿ.ಮೀನಂತಿರುವ ಸ್ಕೂಟರಿನ ಜವ | ಸೈಕಲ್ ಜವ : ಸ್ಕೂಟರಿನ ಜವ<br>$=15:30=\frac{15}{30}=\frac{1}{2}=1:2$ |
| (b) 5ಮೀ ಹಾಗೂ 10ಕಿ.ಮೀ | 5ಮೀ : 10ಕಿ.ಮೀ<br>=5ಮೀ : 10,000ಮೀ<br>$=5:10000=\frac{5}{10000}=\frac{1}{2000}=1:2000$ |
| (c) 50 ಪೈಸೆ ಹಾಗೂ 5 ರೂಪಾಯಿ | 50 ಪೈಸೆ : 5 ರೂಪಾಯಿ<br>=50 ಪೈಸೆ : 500 ಪೈಸೆ<br>$=50:500=\frac{50}{500}=\frac{1}{10}=1:10$ |

A Project of www.eShale.org

15.1.2. ಕೆಳಗಿನ ಅನುಪಾತಗಳನ್ನು ಶೇಕಡಾ ಕ್ರಮದಲ್ಲಿ ಹೇಳಿರಿ:

| | ಶೇಕಡಾ |
|---|---|
| (a) 3:4 | $=\frac{3}{4}=\frac{3}{4}*\frac{25}{25}=\frac{75}{100}=75*\frac{1}{100}=75\%$ |
| (b) 2:3 | $=\frac{2}{3}=\frac{2}{3}*\frac{100}{100}=\left(\frac{200}{3}\right)*\frac{1}{100}=66\frac{2}{3}\%(\approx 66.66\%)$ |

15.1.3. 25ವಿದ್ಯಾರ್ಥಿಗಳಲ್ಲಿ 72% ರಷ್ಟು ಮಂದಿ ಗಣಿತದಲ್ಲಿ ಆಸಕ್ತಿಯನ್ನು ಹೊಂದಿರುವರು. ಗಣಿತದಲ್ಲಿ ಆಸಕ್ತಿ ಇಲ್ಲದವರ ಸಂಖ್ಯೆ ಎಷ್ಟು?

ಗಣಿತದಲ್ಲಿ ಆಸಕ್ತಿ ಇಲ್ಲದವರ ಶೇಕಡ=100%-72%=28%

ಗಣಿತದಲ್ಲಿ ಆಸಕ್ತಿ ಇಲ್ಲದವರ ಸಂಖ್ಯೆ=25* $\frac{28}{100}$ =7.

15.1.4. ಫುಟ್‌ಬಾಲ್ ತಂಡವೊಂದು ಆಡಿದ ಒಟ್ಟು ಪಂದ್ಯಗಳಲ್ಲಿ 10 ಪಂದ್ಯಗಳನ್ನು ಗೆದ್ದಿದೆ. ಅವರ ಗೆಲುವಿನ ಶೇಕಡಾ ಪ್ರಮಾಣವು 40 ಆದರೆ ಅವರು ಆಡಿದ ಒಟ್ಟು ಪಂದ್ಯಗಳೆಷ್ಟು?

40% ಎನ್ನುವುದು 10 ಪಂದ್ಯಗಳನ್ನು ಸೂಚಿಸುತ್ತದೆ

ಹಾಗಾದರೆ 100% ಎಷ್ಟು?= $\frac{10}{40}$ *100=25 ಇದು ಅವರು ಆಡಿದ ಒಟ್ಟು ಪಂದ್ಯಗಳು

15.1.5. ಚಮೇಲಿಯು ತನ್ನಲ್ಲಿರುವ ಹಣದಲ್ಲಿ 75% ರಷ್ಟು ಖರ್ಚು ಮಾಡಿದ ನಂತರ ಅವಳ ಬಳಿ ರೂ. 600 ಉಳಿದಿದ್ದರೆ, ಪ್ರಾರಂಭದಲ್ಲಿ ಆಕೆಯ ಬಳಿ ಇದ್ದ ಹಣವೆಷ್ಟು?

75% ಖರ್ಚು ಮಾಡಿದ ನಂತರ ಉಳಿದದ್ದು (100%-75%)=25%

25% ಎನ್ನುವುದು ರೂ. 600 ನ್ನು ಸೂಚಿಸುತ್ತದೆ

ಹಾಗಾದರೆ 100% ಎಷ್ಟು?= $\frac{600}{25}$ *100=2,400 ಇದು ಆಕೆಯ ಬಳಿ ಇದ್ದ ಹಣ ರೂ. ಗಳಲ್ಲಿ

15.1.6. ಒಂದು ಪಟ್ಟಣದಲ್ಲಿನ 60% ಜನರು ಕ್ರಿಕೆಟ್, 30% ಜನರು ಫುಟ್‌ಬಾಲ್ ಹಾಗೂ ಉಳಿದವರು ಇತರೆ ಆಟಗಳನ್ನು ಇಷ್ಟಪಟ್ಟರೆ, ಆಗ ಶೇಕಡಾ ಎಷ್ಟು ಜನ ಇತರೆ ಆಟಗಳನ್ನು ಇಷ್ಟಪಡುತ್ತಾರೆ? ಜನರ ಒಟ್ಟು ಸಂಖ್ಯೆ 50ಲಕ್ಷಗಳಾದರೆ, ಪ್ರತಿಯೊಂದು ಆಟವನ್ನು ಇಷ್ಟಪಡುವವರ ಸಂಖ್ಯೆಯನ್ನು ಕಂಡುಹಿಡಿಯಿರಿ.

ಕ್ರಿಕೆಟ್ ಇಷ್ಟಪಡುವವರ ಸಂಖ್ಯೆ=50,00,000* $\frac{60}{100}$ =30,00,000=30 ಲಕ್ಷ

ಫುಟ್‌ಬಾಲ್ ಇಷ್ಟಪಡುವವರ ಸಂಖ್ಯೆ=50,00,000* $\frac{30}{100}$ =15,00,000 =15 ಲಕ್ಷ

ಇತರ ಆಟಗಳನ್ನು ಇಷ್ಟಪಡುವವರ %=100%-60%-30%=10%

ಇತರ ಆಟಗಳನ್ನು ಇಷ್ಟಪಡುವವರ ಸಂಖ್ಯೆ =50,00,000* $\frac{10}{100}$ =5,00,000 =5 ಲಕ್ಷ

A Project of www.eShale.org

